**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಿದ ದಿನಾಂಕ 28-07-2021**

**ಮುಂದುವರೆದ ಪಾಟೀ ಸವಾಲು - ಶ್ರೀಮತಿ ಹೆಚ್‌ವಿಆರ್ ವಕೀಲರಿಂದ**

16) ದಾವಾಸ್ವತ್ತುಗಳು ಎಲ್ಲವೂ ಮೂಲತಃ ವೆಂಕಟಪ್ಪನವರಿಗೆ ಸೇರಿದ್ದ ಆಸ್ತಿಗಳು ಎಂದರೆ ಸರಿಯಲ್ಲ. ನನ್ನ ತಂದೆ ಪ್ರತಿವಾದ ಪತ್ರದಲ್ಲಿ ದಾವಾ ಸ್ವತ್ತುಗಳು ಮೂಲತಃ ವೆಂಕಟಪ್ಪನವರಿಗೆ ಸೇರಿದ ಆಸ್ತಿಗಳು ಎಂದು ಬರೆಯಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಓದಲು ಬರೆಯಲು ಬರುತ್ತದೆ. ವಾದಿ ಹಾಜರು ಮಾಡಿದ ನಿ.ಪಿ.3 ರಿಂದ 5 ಪಹಣಿಗಳ ಕಾಲಂ ನಂ.9 ರಲ್ಲಿ ವೆಂಕಟಪ್ಪ ಎಂಬ ಹೆಸರು ನಮೂದಾಗಿದೆ ಎಂದರೆ ಸರಿ. ಅದೇ ರೀತಿ ನಿ.ಪಿ.10 ರಿಂದ 12 ರಲ್ಲಿ ಕೂಡ ವೆಂಕಟಪ್ಪನವರ ಹೆಸರು ನಮೂದಾಗಿದೆ ಎಂದರೆ ಸರಿ. ನಿ.ಪಿ.16 ರಿಂದ ನಿ.ಪಿ.18 ರಲ್ಲೂ ಕೂಡ ವೆಂಕಟಪ್ಪನವರ ಹೆಸರು ನಮೂದಾಗಿದೆ ಎಂದರೆ ಸರಿ. ನಿ.ಪಿ.19 ರ ಕಾಲ ನಂ.10 ರಲ್ಲಿ ನನ್ನ ತಂದೆ ನಾರಾಯಣಪ್ಪನವರ ಹೆಸರಿಗೆ ಖಾತೆ ಪಿತ್ರಾರ್ಜಿತ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ನಿ.ಪಿ.34 ರಲ್ಲೂ ಮಾಲೀಕ ಮತ್ತು ಅನುಭವದಾರರ ಕಾಲಂನಲ್ಲಿ ವೆಂಕಟಪ್ಪನವರ ಹೆಸರು ನಮೂದಾಗಿದೆ ಎಂದರೆ ಸರಿ.

17) 4ನೇ ಪ್ರತಿವಾದಿ ನನಗೆ ಮಾವನಾಗಬೇಕು. ದಾವಾ ಐಟಂ ನಂ.4 ರ ಆಸ್ತಿಯನ್ನು ಈ ದಾವೆ ದಾಖಲಾದ ನಂತರ ನಾವು 4ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇವೆ ಎಂದರೆ ಮಾರಾಟ ಮಾಡಿರುವುದು ನಿಜ. ಐಟಂ ನಂ.2 ರ ಆಸ್ತಿಯನ್ನು 2019 ರಲ್ಲಿ ನಾವು 5ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ. ಈ ಎಲ್ಲಾ ದಾವಾ ಸ್ವತ್ತುಗಳು ಮೂಲತಃ ವೆಂಕಟಪ್ಪನವರಿಗೆ ಸೇರಿದವು ಎಂದರೆ ಸರಿಯಲ್ಲ. ವೆಂಕಟಪ್ಪನವರ ಮರಣಾನಂತರ ಅವರ ಮಗನಿಗೆ ಖಾತೆಯಾಗಬೇಕಾಗಿದ್ದು ಅದನ್ನು ತಪ್ಪಿಸಿ

ನನ್ನ ತಂದೆ 1ನೇ ಪ್ರತಿವಾದಿ ಆಸ್ತಿಗಳ ಖಾತೆಯನ್ನು ತನ್ನ ಹೆಸರಿಗೆ ಮಾಡಿಸಿಕೊಂಡರು ಎಂದರೆ ಸರಿಯಲ್ಲ. ಆ ರೀತಿ ಖಾತೆ ಪಡೆದುಕೊಂಡ ಆಸ್ತಿಗಳನ್ನು ನನ್ನ ತಂದೆ ಅವರ ಸಂಬಂಧಿಕರಿಗೆ ಮಾರಾಟ ಮಾಡಿ ಮತ್ತೆ ಆ ಸಂಬಂಧಿಕರಿಂದ ಖಾತೆಯನ್ನು ತನ್ನ ಹೆಸರಿಗೆ ವಾಪಸ್ಸು ಮಾಡಿಸಿಕೊಂಡರು ಎಂದರೆ ಕ್ರಯಕ್ಕೆ ಪಡೆದವರು ನಮ್ಮ ಸಂಬಂಧಿಕರಲ್ಲ. ಖಾತೆ ಬದಲಾವಣೆಗೆ ವೆಂಕಂಟಪ್ಪನ ಮಕ್ಕಳಿಂದ ಯಾವುದೇ ಸಹಿಗಳನ್ನು ಪಡೆದುಕೊಂಡಿಲ್ಲ ಮತ್ತು ವೆಂಕಟಪ್ಪನವರ ಮಕ್ಕಳ ನಡುವೆ ಯಾವುದೇ ವಿಭಾಗ ನಡೆದಿರಲಿಲ್ಲ ಎಂದರೆ ದಾವಾ ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳು. ನನ್ನ ತಂದೆ 1ನೇ ಪ್ರತಿವಾದಿ ವೆಂಕಟಪ್ಪನವರ ಅಳಿಯನೆಂದರೆ ಸರಿ. ನನ್ನ ತಂದೆ ಪ್ರಭಾವಿ ವ್ಯಕ್ತಿಯಾಗಿದ್ದು ತನ್ನ ಪ್ರಭಾವ ಬೀರಿ ವೆಂಕಟಪ್ಪನವರ ಆಸ್ತಿಗಳ ಖಾತೆಗಳನ್ನು ತನ್ನ ಹೆಸರಿಗೆ ಮಾಡಿಸಿಕೊಂಡರು ಎಂದರೆ ಸರಿಯಲ್ಲ. ನಮಗೂ ಮತ್ತು ದಾವಾ ಸ್ವತ್ತುಗಳಿಗೂ ಸಂಬಂಧವಿರದಿದ್ದರೂ ನನ್ನ ತಂದೆ ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಮೋಸದಿಂದ ಖಾತೆ ಮಾಡಿಸಿಕೊಂಡು ತೊಂದರೆ ಕೊಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ವಾದಿಗಳಿಗೆ ಸೇರಬೇಕಾದ ಆಸ್ತಿಗಳು ಎಂದರೆ ಸರಿಯಲ್ಲ.

ಮರು ವಿಚಾರಣೆ – ಇಲ್ಲಾ.

**(**ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ.**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**